ಇ) ಈ ಹಣವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರವು ಉಪಯೋಗಿಸಿದೆ. ಈ ಆಯವ್ಯಾನದಲ್ಲಿ ಈ ಕೆಳಗೆ ನಮೂದಿಸಿದ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರವು ಕೈಗೊಂಡಿದೆ.

1) ಮುಖ್ಯಕಟ್ಟೆ ಅಭಿವೃದ್ಧಿ ಸಹಾಯಧನ
2) ಪ್ರಾಜೆಕ್ಟ್ ಪ್ಯಾಕೇಜ್ ಯೋಜನೆ
3) ಆರೋಗ್ಯ ಬುತ್ತಿ ಯೋಜನೆ
4) ಚಿಲ್ಲಾ : ರಾಜ್ಯ ಮಟ್ಟದ ಉತ್ಸವಗಳು
5) ವಸತಿ ಕಾರ್ಯಾಗಾರ
6) ರೀನಾವಯಾಳ ಕೈಮಗ್ಗ ಪ್ರೋತ್ಸಾಹದ ಯೋಜನೆ
7) ಸಾಮೂಹಿಕ ವಿಮಾ : ಗುಂಪು ವಿಮಾ ಆಶ್ರಿತಾಯ ಯೋಜನೆ
8) ಮಿತವ್ಯಯ ನಿಧಿ ಯೋಜನೆ

ಈ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಪೂರ್ತಿ ಅನುದಾನವನ್ನು ಬಳಸಲಾಗುತ್ತಿರುವ ಕಾರಣದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನದ ವಿವರ ಈ ರೀತಿ ಇದೆ:

		ರೂ. ಲಕ್ಷಗಳಲ್ಲಿ
1)	ಮುಖ್ಯಕಟ್ಟೆ ಅಭಿವೃದ್ಧಿ ಸಹಾಯಧನ	215.28
2)	ಆರೋಗ್ಯ ಬುತ್ತಿ ಯೋಜನೆ	20.00
3)	ಚಿಲ್ಲಾ ಮಟ್ಟದ ಉತ್ಸವಗಳು	7.50
4)	ರೀನಾವಯಾಳ ಹತಮಗ್ಗ	100.00
5)	ವಸತಿ ಕಾರ್ಯಾಗಾರ	200.00

ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ.

1274(1210) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿಯು ಜಾರಿಗೆ ಬಂದಿರುವುದು; ಯಾವಾಗ ಈ ಕೈಗಾರಿಕಾ ನೀತಿಯನ್ನು ಜಾರಿಗೆ ತರಲಾಯಿತು;ಈ ಹೊಸ ಕೈಗಾರಿಕಾ ನೀತಿಯ ಉದ್ದೇಶಗಳೇನು;

ಅ. ಹೊಸ ಕೈಗಾರಿಕಾ ನೀತಿಯಂತೆ ಕೈಗಾರಿಕೆಗಳನ್ನು ವರ್ಗೀಕರಿಸಲಾಗಿದೆಯೇ; ಹಾಗಿದ್ದರೆ ಕೈಗಾರಿಕೆಯಲ್ಲಿ ಎಷ್ಟು ವರ್ಗಗಳನ್ನು ಮಾಡಲಾಗಿದೆ;

ಇ. ಬಿಜಾಪುರ ಜಿಲ್ಲೆಯನ್ನು ಹೊಸ ಕೈಗಾರಿಕಾ ನೀತಿಯಂತೆ ಯಾವ ಗುಂಪಿಗೆ ಸೇರಿಸಲಾಗಿದೆ;

ಈ. ಸೇರಿಸಲಾದ ಗುಂಪಿನಿಂದ ಬಿಜಾಪುರ ಜಿಲ್ಲೆಗೆ ಆಗುವ ಲಾಭಗಳೇನು;

ಉ. ಹೊಸ ಕೈಗಾರಿಕಾ ನೀತಿಯಂತೆ ವಿಜಾಪುರ ಜಿಲ್ಲೆಯಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಯಾವ ಯಾವ ಕೆಲಸಗಳನ್ನು ಕೈಗೊಳ್ಳಲಾಗುವುದು; ಈ ನೀತಿಯಲ್ಲಿ ಏನಾದರೂ ಯೋಜನೆಗಳನ್ನು ರೂಪಿಸಲಾಗಿದೆಯೇ;

ಊ. ರೂಪಿಸಿದ್ದರೆ, ಅಂತಹ ಯೋಜನೆಗಳಾವುವು, ಯಾವ ಯಾವ ಹೊಸ ಯೋಜನೆಗಳನ್ನು ಬಿಜಾಪುರ ಜಿಲ್ಲೆಯ ಕೈಗಾರಿಕೆಗಳ ಅಭಿವೃದ್ಧಿಗೆ ಅಳವಡಿಸಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ. ಬಂದಿದೆ. ದಿನಾಂಕ: 1-4-2001 ರಿಂದ. ರಾಜ್ಯದಲ್ಲಿ ಮುಂದಿನ ದಶಕಗಳಲ್ಲಿ ಶೇ.8 ರಿಂದ 10 ರವರೆಗೆ ಆರ್ಥಿಕ ಪ್ರಗತಿ ಆ ದಿಸೆಯಲ್ಲಿ Market Driven knowledge based efficient and competitive ಕೈಗಾರಿಕಾ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಅತ್ಯುನ್ನತ ಮಟ್ಟದ ಮೂಲಭೂತ ಕೈಗಾರಿಕಾ ಸೌಲಭ್ಯ, ತಾಂತ್ರಿಕ ಉನ್ನತೀಕರಣ ಕೈಗಾರಿಕೆ ಮತ್ತು ವ್ಯಾಪಾರ ಕ್ಷೇತ್ರ, ನಿಯಂತ್ರಣವನ್ನು ಸಡಿಲಗೊಳಿಸುವುದು, ಪಾರದರ್ಶಕ ಆಡಳಿತವನ್ನು ಮತ್ತುಪ್ರೇಯಾಶೀಲ ಹಾಗೂ ದಕ್ಷ ಆಡಳಿತರನ್ನು ಒದಗಿಸಿ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವ ಮೂಲಕ ಈ ಆರ್ಥಿಕ ಪ್ರಗತಿಯನ್ನು ಸಾಧಿಸಲು ಉದ್ದೇಶಿಸಲಾಗಿದೆ. ಈ ಕೈಗಾರಿಕಾ ನೀತಿಯ ಅತಿ ಮುಖ್ಯ ಉದ್ದೇಶ ಕೈಗಾರಿಕಾ ಕ್ಷೇತ್ರದಲ್ಲಿ ಶೇ.10-12 ಅಭಿವೃದ್ಧಿ ಹೊಂದುವುದು ಮತ್ತು ಪ್ರತಿ ವರ್ಷ 20,000 ಕೋಟಿ ರೂ. ಬಂಡವಾಳವನ್ನು ಆಕರ್ಷಿಸುವುದು. ಅಲ್ಲದೆ ಪ್ರತಿ ವರ್ಷ 1.5 ಲಕ್ಷ ಜನರಿಗೆ ಉದ್ಯೋಗಾವಕಾಶ ಒದಗಿಸುವುದು ಆಗಿದೆ.

ಆ. ಹೌದು. ಎ.ಬಿ.ಸಿ.ಡಿ. ಎಂದು 4 ವರ್ಗಗಳಾಗಿ ವಿಂಗಡಿಸಿದೆ.

ಇ) ವಿಜಾಪುರ ಜಿಲ್ಲೆಯನ್ನು 'ಸಿ' ಗುಂಪಿಗೆ ಸೇರಿಸಲಾಗಿದೆ ಮತ್ತು ಮಿನಿ ಗ್ರೋತ್ ಸೆಂಟರ್ ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾ, ವಿಜಾಪುರವನ್ನು 'ಡಿ' ಗುಂಪಿಗೆ ಸೇರಿಸಲಾಗಿದೆ.

ಈ) ಅ. ಕೈಗಾರಿಕೆಗಾಗಿ ಪಡೆಯುವ ಜಮೀನು ಮತ್ತು ಸಾಲದ ಪತ್ರಗಳನ್ನು ನೊಂದಣಿ ಮಾಡಲು ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿಯಲ್ಲಿ ರಿಯಾಯಿತಿಯನ್ನು ನೀಡಲಾಗುವುದು.

ಆ. ವಿಜಾಪುರ ಜಿಲ್ಲೆಯ ಮಿನಿ ಗ್ರೋಥ್ ಸೆಂಟರ್‌ನಲ್ಲಿ ಸ್ಥಾಪಿಸುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಶೇ.25 ರಷ್ಟು ಗರಿಷ್ಠ ರೂ.12.50 ಲಕ್ಷದವರೆಗೆ ಸಹಾಯಧನ ಮಂಜೂರು ಮಾಡಲಾಗುವುದು 'ಸಿ' ವಲಯದಲ್ಲಿ, ಶೇ.20 ರಷ್ಟು ಗರಿಷ್ಠ ರೂ. 10.00 ಲಕ್ಷದವರೆಗೆ ಸಹಾಯಧನ ಮಂಜೂರು ಮಾಡಲಾಗುವುದು. ವಿಜಾಪುರ ಜಿಲ್ಲೆಯಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ 5 ವರ್ಷಗಳ ಪ್ರವೇಶ ಕರ ವಿನಾಯಿತಿ ನೀಡಲಾಗುವುದು. ಮಿನಿ ಗ್ರೋಥ್ ಸೆಂಟರ್ ವಿಜಾಪುರದಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ 8 ವರ್ಷಗಳ ಪ್ರವೇಶ ತೆರಿಗೆ ವಿನಾಯಿತಿಯನ್ನು ನೀಡಲಾಗುವುದು. ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಲು ಗರಿಷ್ಠ 2 ಎಕರೆ ಜಮೀನು ಕೈಗಾರಿಕೆಗಳಿಗಾಗಿ ಪರಿವರ್ತನಾ ಶುಲ್ಕವನ್ನು ಮನ್ನಾ ಮಾಡಲಾಗುವುದು.

ಉ. 1. ಈ ದಿಸೆಯಲ್ಲಿ 2001-05ನೇ ಸಾಲಿನ ವಿಜಾಪುರ ಜಿಲ್ಲೆಯ ಕೈಗಾರಿಕಾ ಮಾಸ್ಟರ್‌ಪ್ಲಾನ್‌ನ್ನು ತಯಾರಿಸಲಾಗಿದೆ. ಅದನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

2. ಸ್ಥಳೀಯ ಲಭ್ಯವಿರುವ ಕಚ್ಚಾ ಮಾಲಿನ ಆಧಾರದ ಮೇಲೆ ಮಾನವ ಸಂಪನ್ಮೂಲ ಆಧಾರದ ಮೇಲೆ ಸ್ಥಾಪಿಸಬಹುದಾದ ಕೈಗಾರಿಕೆಗಳಿಗೆ ಒತ್ತು ಕೊಡಲಾಗುವುದು. ಮುಖ್ಯವಾಗಿ ಕೃಷಿ ಆಧಾರಿತ ಆಹಾರ ಸಂಸ್ಕರಣಾ ಘಟಕಗಳು, ಹಣ್ಣು ಸಂಸ್ಕರಣಾ ಘಟಕಗಳು, ಕೋಲ್ಡ್ ಸ್ಟೋರೇಜ್, ಜವರಲ್ ಇಂಜಿನಿಯರಿಂಗ್ ವರ್ಕ್ಸ್, ಕೆಮಿಕಲ್ ಇಂಡಸ್ಟ್ರಿ ಇತ್ಯಾದಿಗಳನ್ನು ಸ್ಥಾಪಿಸಬಹುದು.

3. ಮಿನಿ ಗ್ರೋಥ್ ಸೆಂಟರ್ ಅನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಊ. ಈ ಕೆಳಕಂಡಂತೆ ಯೋಜನೆಗಳನ್ನು ರೂಪಿಸಲಾಗಿದೆ. ಯಶಸ್ವಿ ಯೋಜನೆ, ಬಂಡವಾಳ ಹೂಡಿಕೆದಾರರ ಸಮಾವೇಶ, ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ, ಉದ್ಯಮಶೀಲತಾ ಜಾಗೃತ ಶಿಬಿರ, ಸ್ವಶಕ್ತಿ ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೇಲೂರು ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ನಿವೇಶನ ವಿತರಣೆ.

1275(1005) ಶ್ರೀ ಪುಟ್ಟರಂಗನಾಥ್ ಎಸ್.ಜೆಡ್. (ಬೇಲೂರು) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೇಲೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗೆ ನಿವೇಶನಗಳನ್ನು ಮಾಡಿದ್ದು ಇವುಗಳನ್ನು ಕೈಗಾರಿಕೆ ಪ್ರಾರಂಭಿಸುವವರಿಗೆ ವಿತರಿಸಲಾಗಿದೆಯೇ;

ಆ) ಹಗರೆಯಲ್ಲಿರುವ ಕೈಗಾರಿಕೆ ಶೆಡ್‌ಗಳು ಶಿಥಿಲಾವಸ್ಥೆಯಲ್ಲಿದ್ದು, ದುರಸ್ತಿ ಮಾಡಿಸಿ ಬೇರೆಯವರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ;